**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**

**<u>ಸಿ.ಸಿ. ನಃ 05/2025</u>**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮಂಕಿ ಪೊಲೀಸ್ ಠಾಣೆ.

**-ವಿರುದ್ಧ-**

ಆರೋಪಿಃ ಮೊಹಮ್ಮದ ರಾಹಿಕ್ ತಂದೆ ಮಹಮ್ಮದ ಗೌಸ್,
ವಯಸ್ಸುಃ ವರ್ಷಗಳು,
ಸಾಕೀನಃ ಕೊಡಿವಾಯಿ, ಮೇನ್ ರೋಡ್,
2 ನೇ ಕ್ರಾಸ್ ಹತ್ತಿರ, ಭಟ್ಕಳ.

**<u>ದೋಷಾರೋಪಣೆ</u>**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತನ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1. ಮೊದಲನೆಯದಾಗಿ ದಿನಾಂಕಃ 14-04-2024 ರಂದು ಬೆಳಗಿನ ಜಾವ 01-30 ರ ಸಮಯದಲ್ಲಿ ಮಂಕಿ ಪೋಲೀಸ್ ಠಾಣಾ ಸರಹದ್ದಿನಲ್ಲಿ ಆರೋಪಿತನು ಮಾವಿನಕಟ್ಟಾದಲ್ಲಿರುವ ಫಿರ್ಯಾದಿಯಾದ ಸಂದೀಪ ಮಹಾಲೆ ಇವರ ಸರ್ವೇಶ್ವರಿ ಗ್ಯಾಸ್ ಆಫೀಸನ ಶೇಟ್ರನ್ನು ಕಬ್ಬಿಣದ ರಾಡ್ ನಿಂದ ಮೀಟಿ ತೆಗೆದು ಗ್ಯಾಸ್ ಆಫೀಸನಲ್ಲಿ ಕಳ್ಳತನ ಮಾಡುವ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿದ್ದು, ಈ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2. ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತನು ಗ್ಯಾಸ್ ಆಫೀಸನ ಒಳಗಡೆ ಅಕ್ರಮ ಪ್ರವೇಶ ಮಾಡಿ ಅಫೀಸ್ ನಲ್ಲಿ ಅಳವಡಿಸಿದ ಸಿ ಸಿ ಟಿವಿ ಕ್ಯಾಮೆರಾದ ಡಿವಿಆರ್ ನ್ನು ಮತ್ತು ಮಾಲೀಕರು ಕುಳಿತುಕೊಳ್ಳುವ ಟೇಬಲ್ ನಲ್ಲಿದ್ದ ರೂಪಾಯಿ 70,000/- ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಈ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 13-03-2026.

**(ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 05/2025**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮಂಕಿ ಪೊಲೀಸ್ ಠಾಣೆ.

**-ವಿರುದ್ಧ-**

ಆರೋಪಿಃ ಮೊಹಮ್ಮದ ರಾಹಿಕ್ ತಂದೆ ಮಹಮ್ಮದ ಗೌಸ್,
ವಯಸ್ಸುಃ ವರ್ಷಗಳು,
ಸಾಕೀನಃ ಕೊಡಿವಾಯಿ, ಮೇನ್ ರೋಡ್,
2 ನೇ ಕ್ರಾಸ್ ಹತ್ತಿರ, ಭಟ್ಕಳ.

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 13-03-2026 **(ಶ್ರೀ ಬಿ.ಸಿ. ಚಂದ್ರಶೇಖರ್)**
ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**